ಮಲಯಾಳಂ ಮೂಲ: ಸಂತೋಷ್ ಏಚ್ಚಿಕ್ಕಾನಂ

**ಕನ್ನಡಕ್ಕೆ: ಕೆ.ಕೆ. ಗಂಗಾಧರನ್**

ಕದಿರೇಶನ್ ಜೊತೆಗೆ ಗೋಪಾಲ್ ಯಾದವ್ ಕೂಡ ಬಸ್ಸು ಹತ್ತಿದ್ದ. ಅವನೊಂದಿಗೆ ಮೂರು ಬಂಗಾಳಿ ಯುವಕರೂ ಇದ್ದರು. ಎಷ್ಟು ವೇಗವಾಗಿ ಹೋದರೂ ಬಸ್ಸು ಪೊಯಿನಾಚ್ಚಿ ತಲುಪಲು ಕನಿಷ್ಠ ಇಪ್ಪತ್ತು ನಿಮಿಷಗಳಾದರೂ ಬೇಕು.

ಅದು ಹೋಗಲಿ ಬಿಡಿ... ಅಲ್ಲಿಯ ತನಕ ನಾವು ಕಲಂದನ್ ಹಾಜಿಯಾರವರ ಕುರಿತು ವಿಚಾರ ಮಾಡೋಣ.

ಹಿಂದೆ ತಳಂಗರೆಯಿಂದ ದುಬಾಯ್ ತನಕ ನೌಕೆ ಓಡಿಸಿಕೊಂಡು ಹೋದ ಪಾರ್ಟಿ ನಮ್ಮ ಈ ಕಲಂದನ್ ಹಾಜಿ. ಕಳೆದ ಜನವರಿಗೆ ಅವರಿಗೆ ಭರ್ತಿ 86 ವರ್ಷ ವಯಸ್ಸು. ಹಾಜಿಯವರು ತಮ್ಮ ನಾಲ್ಕು ಹೆಂಡತಿಯರ ಪೈಕಿ ಕುಂಜೀಬಿಯನ್ನು ಮರೆತಿದ್ದು ಬಿಟ್ಟರೆ, ಅವರ ನೆನಪಿನ ಶಕ್ತಿಗೆ ಯಾವುದೇ ಕುಂದಿಲ್ಲ. ಹಾಗೆ ನೋಡಿದರೆ, ಕಲಂದನ್ ಹಾಜಿಯವರಿಗೆ ನಾಲ್ಕಲ್ಲ, ನಲವತ್ತು ಹೆಂಡತಿಯರನ್ನು ಸಂಭಾಳಿಸುವಷ್ಟು ಸಾಮರ್ಥ್ಯವಿತ್ತು. ಹಾಗೆಂದು ಊರವರು ಅವರ ಬಗ್ಗೆ ಗತ್ತಿನಿಂದ ಹೇಳಿಕೊಂಡು ತಿರುಗುತ್ತಿದ್ದರು.

ಹಾಜಿಯಣ್ಣನಿಗೆ ಆಮಿನಾಳಲ್ಲಿ ಹುಟ್ಟಿದ ಮಗಳು ರುಖಿಯಾ. ರುಖಿಯಾಳ ಮಗ ರಿಸ್ವಾನ್. ಅವನು ಅಮೆರಿಕಾದಲ್ಲಿ ಖ್ಯಾತ ಕಾರ್ಡಿಯಾಕ್ ಸರ್ಜನ್. ಅವನ ನಿಖಾ(ಮದುವೆ) ಕಳೆದ ವಾರ ಬೆಂಗಳೂರಿನಲ್ಲಿ ನಡೆಯಿತು. ಊರವರಿಗೆಲ್ಲಾ ಸತ್ಕಾರಕೂಟವನ್ನು ಏರ್ಪಡಿಸಿ ಬಿರಿಯಾನಿ ಬಡಿಸಬೇಕೆಂಬುದು ತಾತನ ಬೃಹದಾಶೆ. ಎಂಬತ್ತಾಯಿತಲ್ಲವೆ? ಹಾಜತ್(ಬಯಕೆ) ನಡೆಸದೆ ಹಾಜಿಯವರು ಮಯ್ಯತ್ತಾಗಿ ಬಿಟ್ಟರೆ ಅದು ಶಾಶ್ವತ ಕೊರಗಾಗಿ ಉಳಿದುಬಿಡುತ್ತದೆ. ಆದ್ದರಿಂದಲೇ ರಿಸ್ವಾನ್ ಹೆಚ್ಚಿಗೆ ತಲೆಕೆಡಿಸಿಕೊಳ್ಳದೆ ಸತ್ಕಾರ ಕೂಟಕ್ಕೆ ಒಪ್ಪಿಕೊಂಡಿದ್ದ. ಅದರಂತೆ ಇಂದು ಸಂಜೆ ಆರರಿಂದ ಒಂಬತ್ತರವರೆಗೆ ರಿಸೆಪ್ಷನ್!

ಇದೋ ನೋಡಿ, ಇದೇ ಕಲಂದನ್ ಹಾಜಿಯವರ ನಿವಾಸ. ನಿವಾಸ ಎನ್ನುವುದಕ್ಕಿಂತಲೂ ಅರಮನೆ ಎಂದು ಹೇಳಿದರೆ ಸೂಕ್ತ. ತಾತ್ಕಾಕಾಲಿವಾಗಿ ಹಾಕಿದ ಚಪ್ಪರದ ಪ್ರಮುಖದ್ವಾರದಿಂದ ಮನೆ ತಲುಪಲು ತುಂಬಾ ನಡೆಯಬೇಕು. ಅಸಲಿಗೆ ನಾಲ್ಕೈದು ಸಾವಿರ ಮಂದಿ ಭಾಗವಹಿಸುವ ಬೃಹತ್ ಸಮಾರಂಭ. ಮೇಜು ಖುರ್ಚಿಗಳಿಗೆಲ್ಲಾ ಶುಭ್ರ ಬಿಳಿಯ ವಸ್ತ್ರಗಳನ್ನು ಹೊದೆಸಿ ಅಲಂಕರಿಸಲಾಗಿತ್ತು. ವಿದೇಶದಿಂದ ಆಮದು ಮಾಡಿಸಲ್ಪಟ್ಟ ವಿಶಿಷ್ಟ ಹೂಗಳಿಂದ ಕಲ್ಯಾಣ ವೇದಿಕೆಯನ್ನು ಸಿದ್ಧಗೊಳಿಸಲಾಗಿತ್ತು. ಸಮಾರಂಭಗಳೆಲ್ಲಾ ಮುಗಿದ ನಂತರವೂ ವೇದಿಕೆಯ ಬಗ್ಗೆ ಜನ ಮಾತನಾಡುವಂತಿರಬೇಕು ಎಂಬುದು ಹಾಜಿಯವರ ಬಯಕೆಯಂತೆ. ಹಾಗೆಂದು ಹಾಜಿಯವರ ಬಲಗೈ ಬಂಟ ಮತ್ತು ರಿಯಲ್ ಎಸ್ಟೇಟಿನ ಪ್ರಮುಖ ಪಾಲುದಾರನೂ ಆದ ಅಸ್ಸೈನಾರ್ ಊರತುಂಬಾ ಪ್ರಚಾರ ಮಾಡಿದ್ದರು.

ಏತನ್ಮಧ್ಯೆ, ಏನೋ ಜ್ಞಾಪಿಸಿಕೊಂಡವರಂತೆ ಅಸ್ಸೈನಾರ್ ಮೊಬೈಲ್ ಎತ್ತಿ ರಾಮಚಂದ್ರನಿಗೆ ಫೋನಾಯಿಸಿದರು. ರಾಮಚಂದ್ರ ಪೊಯಿನಾಚ್ಚಿಯಲ್ಲಿರುವ ಒಬ್ಬ ವ್ಯಾಪಾರಿ. ಸ್ಟೇಷನರಿ, ಪತ್ರಿಕೆಗಳು, ಷರಬತ್ತು, ಬೀಡಿ, ಬೀಡಾ, ಸಿಗರೇಟು ತುರ್ತಿನ ಸಂದರ್ಭದಲ್ಲಿ ಅಂಚೆ ಕವರುಗಳು... ಮುಂತಾದ ಅನೇಕ ಅಗತ್ಯ ವಸ್ತುಗಳು ರಾಮಚಂದ್ರನ ಅಂಗಡಿಯಲ್ಲಿ ಲಭ್ಯ.